# ಯುದ್ಧೋನ್ಮಾದ ಎಂಬ ವ್ಯಸನ

ಭಾರತ ಸ್ವಾತಂತ್ರ ಪಡೆಯುವುದರೊಂದಿಗೆ ದೇಶ ವಿಭಜನೆಯೂ ಆಯಿತು. ಅದೊಂದು ಕರಾಳ ನೆನಪು. ಭಾರತ ಮತ್ತು ಪಾಕಿಸ್ತಾನಗಳ ದಾಯಾದಿ ಕಲಹವೂ ಅಂದಿನಿಂದಲೇ ಪ್ರಾರಂಭವಾಯಿತು. ಮೂರು ಯುದ್ಧಗಳೂ ನಡೆದುಹೋದವು. ಆದರೂ ಎರಡೂ ದೇಶಗಳೂ ಯುದ್ಧ ಭೀತಿಯಿಂದ ಹೊರಬರಲು ಸಾಧ್ಯವಾಗಿಲ್ಲ. ಅದೊಂದು ತೂಗುಕತ್ತಿ. ಎರಡೂ ಬದಿಯಲ್ಲಿ ಕಾಲುಕೆರೆಯುವುದು ನಿರಂತರ ನಡೆದೇ ಇದೆ. ಪ್ರತಿ ದೀಪಾವಳಿಯಲ್ಲಿ ಗಡಿರೇಖೆಯ ಆಚೀಚೆ ಪರಸ್ಪರರು ಸಿಹಿ ಹಂಚಿಕೊಳ್ಳುವ ಪರಿಪಾಠವಿತ್ತು. ಈ ಬಾರಿ ಅದನ್ನು ಮುರಿಯಲಾಗಿದೆ. ಗುಂಡಿನ ಚಕಮಕಿ ಎರಡೂ ಕಡೆ ಪಟಾಕಿ ಸಿಡಿಸಿದಂತೆ ನಡೆಯುತ್ತಲೇ ಇರುತ್ತದೆ. ಅದನ್ನು ಮೀರಿ ಈಗ ನಿರ್ದಿಷ್ಟ ದಾಳಿಗಳು ನಡೆಯುತ್ತಿವೆ. ಇದನ್ನು ಚಿಕಿತ್ಸಕ ದಾಳಿ ಎಂದೇಕೆ ಮಾಧ್ಯಮಗಳು ಕರೆಯುತ್ತಿಲ್ಲ ಎಂಬುದು ನನಗೆ ಅಚ್ಚರಿ. ವಿರೋಧಿ ಎಚ್ಚರವಾಗಿರುವನೋ ಇಲ್ಲವೋ ಎಂದು ಪರೀಕ್ಷಿಸುವ ದಾಳಿಯನ್ನು ಚಿಕಿತ್ಸಕ ದಾಳಿ ಎಂದು ಕರೆಯುವುದೇ ಸರಿ. ಸೆಪ್ಟಂಬರ್, 18 ರಂದು ಉರಿ ಪಟ್ಟಣದ ಮೇಲೆ ನಡೆದ ದಾಳಿ ನಮ್ಮ 18 ಯೋಧರನ್ನು ಬಲಿ ಪಡೆಯಿತು. ಭಾರತ ಇದರಿಂದ ಸಹಜವಾಗಿಯೆ ರೊಚ್ಚಿಗೆದ್ದಿತು. ಸಮಯಕ್ಕಾಗಿ ಕಾದು ಭಾರತವೂ ಒಂದು ನಿರ್ದಿಷ್ಟ ದಾಳಿಯನ್ನು ನಡೆಸಿತು. ಪರಿಣಾಮ ಎರಡೂ ಕಡೆ ಒಂದೇ; ಸಾವು, ನೋವು.

ಹೇಳಿಕೇಳಿ ಇಂದಿನ ದಿನಮಾನದಲ್ಲಿ ರಾಷ್ಟ್ರ ಪ್ರೇಮ ಉನ್ಮತ್ತತೆಯ ಹಂತವನ್ನು ತಲುಪುತ್ತಿದೆ. ನೆರೆಹೊರೆಯನ್ನು ಪ್ರೀತಿಸು ಎಂದರೆ ನೆರೆಯ ಮನೆಯನ್ನಷ್ಟೆ ಅಲ್ಲ. ನೆರೆ ರಾಜ್ಯ, ನೆರೆ ರಾಷ್ಟ್ರ ಎಲ್ಲವೂ ಆಗಬಹುದು. ಆದರೆ ನಾವು ಸಂದರ್ಭಕ್ಕೆ ತಕ್ಕಹಾಗೆ ಸಂಕುಚಿತ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತೇವೆ. ವೈರಿಯನ್ನು ದ್ವೇಷಿಸುವುದೂ ರಾಷ್ಟ್ರ ಪ್ರೇಮದ ಕುರುಹಾಗಿ ಕಾಣಿಸಿಕೊಳ್ಳುತ್ತಿರುವುದು ವಿಕಟ ಪ್ರೇಮದ ಅಟ್ಟಹಾಸ. ಕಾವೇರಿಯಲ್ಲಿ ನೀರು ತುಟ್ಟಿಯಾದಾಗ ಕರ್ನಾಟಕ, ತಮಿಳುನಾಡು ರಾಜ್ಯಗಳು ಅಕ್ಷರಶಃ ತೋಳೇರಿಸಿ ನಿಲ್ಲುತ್ತವೆ. ಇನ್ನು ಪಾಕಿಸ್ತಾನವನ್ನು ದ್ವೇಷಿಸಲು ದಂಡಿಯಾದ ಕಾರಣಗಳಿವೆ. ಗಡಿರೇಖೆಗಳ ಬಗ್ಗೆ ಮತ್ತೆಮತ್ತೆ ಚರ್ಚಿಸಿದರೂ ಫಲಿತಾಂಶ ಶೂನ್ಯವೆ. ಮತ್ತೆ ಕೂಡಿಕೊಳ್ಳುವ ಮಾತಿರಲಿ, ಇರುವ ರೇಖೆಯನ್ನು ಅಧಿಕೃತಗೊಳಿಸಲು ಸಾಧ್ಯವಾಗುತ್ತಿಲ್ಲ. ಒಪ್ಪಂದಗಳು ನೆನೆಗುದಿಗೆ ಬಿದ್ದಿವೆ.

ಕಾರ್ಗಿಲ್ ಯುದ್ಧದಲ್ಲಿ ಭಾರತ ಗೆದ್ದಿತು. ಅದಕ್ಕಾಗಿ ನಮ್ಮ ಸೈನಿಕರ ಬಗ್ಗೆ ಹೆಮ್ಮೆಪಡೋಣ, ಅವರನ್ನು ಗೌರವಿಸೋಣ. ಆದರೆ ಪ್ರತಿವರ್ಷವೂ ಅದರ ನೆನಪಿನಲ್ಲಿ ವಿಜಯ ದಿವಸವನ್ನು ಆಚರಿಸುವುದು ಅಷ್ಟೇನೂ ಅಪೇಕ್ಷಣೀಯವಲ್ಲ. ಯುದ್ಧವೆಂದರೆ ವಿನಾಶ. ಗೆಲುವು ಯಾರದೇ ಇರಲಿ ಅದನ್ನು ಸಂಭ್ರಮಿಸುವುದರಲ್ಲಿ ಅರ್ಥವಿಲ್ಲ. ಕ್ರೀಡೆಯಲ್ಲಿ ಗೆಲುವನ್ನು ಸಂಭ್ರಮಿಸುವುದು ಸಹಜ. ಅಲ್ಲಿ ದ್ವೇಷವೂ, ನಾಶವೂ ಇರುವುದಿಲ್ಲ. ಯುದ್ಧದಲ್ಲಿ ಗೆಲುವನ್ನು ಮರೆಯಬೇಕು. 1962ರ ಚೀನಾ ಯುದ್ಧದಲ್ಲಿ ಭಾರತ ಸೋತಿತು. ಹಾಗೆಂದು ಪ್ರತಿವರ್ಷವೂ ಆ ದಿನ ನಾವು ಅವಮಾನಪಟ್ಟುಕೊಳ್ಳುವುದಿಲ್ಲ, ಅದನ್ನು ಮರೆತಿದ್ದೇವೆ. ಅದು ಕೇವಲ ಸಾಂದರ್ಭಿಕ ಮತ್ತು ಸಾಂಕೇತಿಕ. ಸರ್ವತಂತ್ರ, ಸ್ವತಂತ್ರ ರಾಷ್ಟ್ರಗಳು ಎಂದಿಗೂ ಯಾರಿಗೂ ಅಡಿಯಾಳಾಗಲು ಇಚ್ಛೆಪಡುವುದಿಲ್ಲ. ಒಬ್ಬ ಪ್ರಜೆಗೆ ತನ್ನ ರಾಷ್ಟ್ರದ ಬಗೆಗಿನ ಅಭಿಮಾನ, ಹೆಮ್ಮೆ ಪ್ರಶ್ನಾತೀತವಾದುದು. ಅದನ್ನು ಎತ್ತಿ ಹಿಡಿಯುವ ಕರ್ತವ್ಯ ಆ ರಾಷ್ಟ್ರದ ವ್ಯವಸ್ಥೆಯ ಜವಾಬುದಾರಿ.

ಇತ್ತೀಚೆಗೆ ಸರ್ಕಾರದ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಸಹ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಪಾಕಿಸ್ತಾನ ಒಂದು ಉಗ್ರಗಾಮಿ ರಾಷ್ಟ್ರ, ಅದನ್ನು ಏಕಾಂಗೀಕರಿಸಿ ಎಂದು ಗೃಹ ಸಚಿವರೇ ಹೇಳಿಕೆ ನೀಡುತ್ತಾರೆ. ಅವರದೇ ಪಕ್ಷದ ಕಾರ್ಯದರ್ಶಿಯೊಬ್ಬರು 'ನಮ್ಮ ಒಂದು ಹಲ್ಲಿಗೆ ಅವರ ದವಡೆಯನ್ನೇ ಮುರಿಯಬೇಕು' ಎಂದರು. ರಾಷ್ಟ್ರೀಯ ವಾಹಿನಿಯೊಂದರ ನಿರೂಪಕರೊಬ್ಬರು ಇನ್ನೂ ಸ್ವಲ್ಪ ಮುಂದೆ ಹೋಗಿ ಅವರ ಕಾಲು ಮುರಿಯಬೇಕು, ಅವರು ತೆವಳುವಂತೆ ಮಾಡಬೇಕು ಇತ್ಯಾದಿಯಾಗಿ ಬಡಬಡಿಸಿದರು. ಕಣ್ಣು ಕಿತ್ತು ಕೈಯಲ್ಲಿಟ್ಟು ಕಳಿಸುವ ಉನ್ಮಾದದ ಮಾತುಗಳು ಕೇಳಿಬಂದವು. ಸ್ವತಃ ರಕ್ಷಣಾ ಸಚಿವರೆ ಅಣು ಬಾಂಬಿನ ಪ್ರಯೋಗ ಯಾರಿಂದ ಮೊದಲು ಎಂಬುದು ಮುಖ್ಯವಲ್ಲ ಎಂದು ಹೇಳಿ ಭಾರತದ ಸ್ವವಿವೇಕದ ನಿಲುವನ್ನೇ ಪ್ರಶ್ನಿಸಿಬಿಟ್ಟರು. ಇಂತಹ ಸಾರ್ವತ್ರಿಕ ಹೇಳಿಕೆಗಳಿಂದ ಜನರ ಭಾವನೆಗಳು ಕೆರಳುತ್ತವೆ, ದ್ವೇಷ ಹೆಚ್ಚಲು ಕಾರಣವಾಗುತ್ತದೆ ಎಂಬುದನ್ನು ಹಿರಿಯರು ಅರಿತುಕೊಳ್ಳಬೇಕು.

ಎರಡೂ ರಾಷ್ಟ್ರಗಳೂ ಈಗ ಅಣ್ವಸ್ತ್ರ ರಾಷ್ಟ್ರಗಳೆನಿಸಿಕೊಂಡಿವೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಇವೆರಡೂ ರಾಷ್ಟ್ರಗಳು ನೂರೈವತ್ತು ದೇಶಗಳ ಕೆಳಗಿವೆ. ಆದರೆ ಅಣ್ವಸ್ತ್ರ ಹೊಂದಿದ ರಾಷ್ಟ್ರಗಳಲ್ಲಿ ಮೊದಲ ಆರರ ಒಳಗಿವೆ! ಈ ಬಡ ಮಧ್ಯಮ ರಾಷ್ಟ್ರಗಳ ಯುದ್ಧೋನ್ಮಾದತೆ ಬೆಚ್ಚಿಬೀಳಿಸುವಂತಿದೆ. ಒಂದೇ ಜನಾಂಗಮೂಲದ ರ್‍ವಾಂಡ ಮತ್ತು ಬುರುಂಡಿ ದೇಶಗಳು ಬಡಿದಾಡಿಕೊಂಡು ರಕ್ತಪಾತದಲ್ಲಿ ವಿನಾಶದ ಅಂಚಿಗೆ ತಲುಪಿದ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಯುದ್ಧದಿಂದ ಪಾಠ ಕಲಿತಿರುವ ಯೂರೋಪಿನ ಗಡಿಗಳು ಈಗ ಹೇಗೆ ಸ್ನೇಹಪರವಾಗಿವೆ ಎಂಬುದು ನಮಗೆ ಮಾದರಿಯಾಗಬೇಕು.

ಸದ್ಯ, ಭಾರತ ಮತ್ತು ಪಾಕಿಸ್ತಾನಗಳಿಗೆ ಬೇಕಾಗಿರುವುದು ಆರ್ಥಿಕ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕಗಳ ಮುನ್ನಡೆ, ಯುದ್ಧವಲ್ಲ ಎಂಬುದನ್ನು ಎರಡೂ ದೇಶಗಳೂ ಮನಗಾಣಬೇಕಾಗಿದೆ.

■ ಮೂಚಿ

## ಮಾತೇ ಮುತ್ತು

★ ರಾಜಕೀಯದಲ್ಲಿ ಮೂರ್ಖತನ ಎನ್ನುವುದು ಅಂಗವೈಕಲ್ಯವಲ್ಲ.

—ನೆಪೋಲಿಯನ್ ಬೊನಪಾರ್ಟ್

★ ಕೆಟ್ಟ ಜನರು ಇಲ್ಲವೆಂದಾದಲ್ಲಿ, ಒಳ್ಳೆಯ ವಕೀಲರೂ ಇರಲು ಸಾಧ್ಯವಿಲ್ಲ.

—ಚಾರ್ಲ್ಸ್ ಡಿಕೆನ್ಸ್

★ ಜೀವನದಲ್ಲಿ ಅಪಾಯಗಳನ್ನು ಎದುರಿಸಿ. ಗೆದ್ದರೆ ನೀವು ನಾಯಕತ್ವ ವಹಿಸಬಹುದು, ಸೋತರೆ ಮಾರ್ಗದರ್ಶಕರಾಗಬಹುದು.

ಸ್ವಾಮಿ ವಿವೇಕಾನಂದ

★ ಮನುಷ್ಯನೊಬ್ಬ ತನ್ನ ಮನಸ್ಸನ್ನು ನಿಯಂತ್ರಿಸಿದರೆ ಎಲ್ಲ ಜ್ಞಾನ ಮತ್ತು ಪ್ರಭಾವವೂ ಸಹಜವಾಗಿ ಆತನ ಬಳಿಗೆ ಬರುತ್ತದೆ.

ಗೌತಮ ಬುದ್ಧ

★ ಕೆಡುಕುಗಳ ವಿರುದ್ಧ ಹೋರಾಡುವ ಭರದಲ್ಲಿ ನಾವೇ ಕೆಡುಕುಗಳನ್ನು ಉಂಟು ಮಾಡದಂತೆ ನೋಡಿಕೊಳ್ಳಬೇಕು.

—ಫ್ರೆಡ್ರಿಕ್ ನೀಟ್ಸೆ

★ ಎಲ್ಲ ಶ್ರೇಷ್ಠ ಸತ್ಯಗಳೂ ದೇಶದ್ರೋಹವೆಂದೇ ಆರಂಭವಾಗುತ್ತದೆ.

—ಜಾರ್ಜ್ ಬರ್ನಾರ್ಡ್ ಷಾ

★ ಪ್ರತಿಯೊಂದು ಗಾಯಗಳ ಮೂಲಕ ಪ್ರಕಾಶವು ನಿಮ್ಮನ್ನು ಪ್ರವೇಶಿಸುತ್ತದೆ.

—ಜಲಾಲುದ್ದೀನ್ ರೂಮಿ

★ ಅಸಾಧ್ಯ ಎನ್ನುವುದು ನಮ್ಮ ಸಾಮರ್ಥ್ಯವನ್ನು ವಿಸ್ತರಿಸಲು ಇರುವ ಅವಕಾಶ.

—ಚಾರ್ಲ್ಸ್ ಸ್ವಿಂಡಲ್

★ ಬುದ್ಧಿವಂತಿಕೆ ಮತ್ತು ಚಾರಿತ್ರ್ಯ ನೈಜ ಶಿಕ್ಷಣದ ಗುರಿಗಳು.

—ಮಾರ್ಟಿನ್ ಲೂಥರ್ ಕಿಂಗ್ ಜೂ.

★ ಯಾರೂ ಸಾಯಲು ಬಯಸುವುದಿಲ್ಲ; ಸ್ವರ್ಗಕ್ಕೆ ಹೋಗಲು ಬಯಸುವವರೂ ಸಾಯಲು ಸಿದ್ಧರಿಲ್ಲ.

—ಸ್ಟೀವ್ ಜಾಬ್ಸ್

★ ವಿವರಿಸುತ್ತಾ ಕುಳಿತುಕೊಳ್ಳಬೇಡಿ; ನಿಮ್ಮ ಗೆಳೆಯರಿಗೆ ಅದರ ಅಗತ್ಯವಿರುವುದಿಲ್ಲ, ನಿಮ್ಮ ವೈರಿಗಳು ಅದನ್ನು ನಂಬುವುದಿಲ್ಲ.

—ಎಲ್ಬರ್ಟ್ ಹ್ಯೂಬರ್ಡ್

★ ಚಾರಿತ್ರ್ಯ ಎಂದರೆ ಮರದಂತೆ. ಪ್ರತಿಷ್ಠೆ ಅದರ ನೆರಳಿನಂತೆ. ಮರ ಸತ್ಯ, ನೆರಳು ಊಹೆ.

—ಅಬ್ರಹಾಂ ಲಿಂಕನ್